**10ನೇ ತರಗತಿ ಕನ್ನಡ ರಸಪ್ರಶ್ನೆ - 01. ಯುದ್ಧ [ಗದ್ಯ] ದಿನಾಂಕ- 28-6-2019**

1. ಸಾ.ರಾ. ಅಬೂಬಕ್ಕರ್ ರವರ ಜನ್ಮ ಸ್ಥಳ ಯಾವುದು?

**ಉತ್ತರ:- ಕಾಸರಗೋಡು**

2. ಸಹನಾ, ಕದನವಿರಾಮ, ವಜ್ರಗಳು, ಪಯಣ, ಚಪ್ಪಲಿಗಳು - ಇವುಗಳಲ್ಲಿ 'ಯುದ್ಧ' ಪಾಠದ ಆಧಾರ ಕೃತಿ ಯಾವುದು?

**ಉತ್ತರ:- 'ಚಪ್ಪಲಿಗಳು' ಕೃತಿ**

3. ಸಾ.ರಾ. ಅಬೂಬಕ್ಕರ್ ರವರು ಎಲ್ಲಿ, ಎಷ್ಟರಲ್ಲಿ ಜನಿಸಿದರು?

**ಉತ್ತರ: ಕೇರಳದ ಕಾಸರಗೋಡಿನಲ್ಲಿ 30 ನೇ ಜೂನ್ 1936**

4. 'ಯುದ್ಧ' ಪಾಠದಲ್ಲಿ ಬರುವ ಸೇನಾ ವೈದ್ಯನ ಹೆಸರೇನು?

**ಉತ್ತರ:- ರಾಹಿಲ್**

5. ರಾಹಿಲನು ಮುದುಕಿ ಎದುರಿಗೆ ನುಡಿದ ಗಂಭೀರ ಮಾತು ಯಾವುದು?

**ಉತ್ತರ:- " ನಾನು ಯುದ್ಧಮಾಡುವ ಮೂರ್ಖರ ಕಡೆಯವರನಲ್ಲ, ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" .**

6. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು?

**ಉತ್ತರ:- "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ".**

7. ಡಾಕ್ಟರ್, ಪೈಲಟ್, ಗ್ರೌಂಡ್, ರೇಡಿಯೋ - ಇವುಗಳು ಯಾವ ಅನ್ಯ ಭಾಷೆಗೆ ಸೇರಿವೆ?

**ಉತ್ತರ:- ಇಂಗ್ಲಿಷ್ ಅಥವಾ ಆಂಗ್ಲ ಭಾಷೆ**

8. 'ಪ' ವರ್ಗದ ಜನ್ಯಸ್ಥಾನ ಯಾವುದು?

**ಉತ್ತರ:- ' ಓಷ್ಠ' [ತುಟಿ]**

9. ವರ್ಗದ ದ್ವಿತೀಯ ಮತ್ತು ಚತುರ್ಥ ಸಾಲಿನ ಅಕ್ಷರಗಳಿಗೆ ಏನೆಂದು ಕರೆಯುವರು?

**ಉತ್ತರ:- ಮಹಾಪ್ರಾಣಗಳು**

10 ವ್ಯಂಜನಗಳಿಗೆ ಸ್ವರ ಸೇರಿ ಉಂಟಾಗುವ ಅಕ್ಷರ ಯಾವುದು?

**ಉತ್ತರ:- ಗುಣಿತಾಕ್ಷರ**

11. ಕನ್ನಡ ವರ್ಣಮಾಲೆಯ ಸಂಧ್ಯಕ್ಷರಗಳು ಯಾವುವು?

**ಉತ್ತರ:- ' ಐ' ಮತ್ತು 'ಔ'**

12. "ನಾನು ಗಾಯಗೊಂಡಿದ್ದೇನೆ, ದಯವಿಟ್ಟು ಬಾಗಿಲು ತೆಗೆಯಿರಿ" ಈ ಮಾತನ್ನು ಯಾರು ಯಾರಿಗೆ ಹೇಳಿದರು?

**ಉತ್ತರ:- ರಾಹಿಲನು ಮುದುಕಿಗೆ ಹೇಳಿದನು.**

13. 'ಟ' ವರ್ಗದ ಅನುನಾಸಿಕ ಅಕ್ಷರ ಯಾವುದು?

**ಉತ್ತರ:- 'ಣ'**

14. 'ಕಂಠ ತಾಲವ್ಯ' ಅಕ್ಷರಗಳು ಯಾವುವು?

**ಉತ್ತರ:- ಎ ಏ ಐ**

15. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ" ಈ ಮಾತನ್ನು ಯಾರು ಯಾರಿಗೆ ಪ್ರಶ್ನಿಸುತ್ತಾರೆ?

**ಉತ್ತರ:- ಮುದುಕಿಗೆ ಸೈನಿಕರು ಪ್ರಶ್ನಿಸುತ್ತಾರೆ.**

16. ಕ ಚ ಟ ತ ಪ ಗ ಜ ಡ ದ ಬ ; ಅಲ್ಪಪ್ರಾಣಗಳು :; ರ ಷ ಸ ಹ ಲ ಳ ಯ ವ. ; ........................

**ಉತ್ತರ:- ಅವರ್ಗೀಯ ವ್ಯಂಜನಗಳು**

17. "ಓ... ಈ ಕಣ್ಣುಗಳು ಯುದಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ " ಈ ಮಾತನ್ನು ಮುದುಕಿ ಯಾವ ಸಂದರ್ಭದಲ್ಲಿ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ?

**ಉತ್ತರ:- ಮುದುಕಿಯ ಮನೆಯ ಬಾಗಿಲನ್ನು ಹೊರಗಿನಿಂದ ಯಾರೋ ತಟ್ಟಿ, "ಬಾಗಿಲು ತೆರೆಯಿರಿ" ಎಂದಾಗ ಮುದುಕಿ ಬಾಗಿಲು ತೆರೆಯುವ ಸಂದರ್ಭದಲ್ಲಿ " ಬಾಗಿಲು ತೆಗೆಯಬೇಡಿ" ಎಂಬ ರಾಹಿಲನ ದಯನೀಯ ನೋಟ ನೋಡಿ ಮನಸ್ಸಿನಲ್ಲಿ ಮುದುಕಿ ಅಂದುಕೊಳ್ಳುತ್ತಾಳೆ.**

18. ಕಂಠೌಷ್ಠ್ಯ ಅಕ್ಷರಗಳು ಯಾವುವು?

**ಉತ್ತರ:- ಒ ಓ ಔ**

19. ಹತಾಶೆ ; ನಿರಾಸೆ : ; ರೋದನ ; .............

**ಉತ್ತರ:- ಅಳುವಿಕೆ**

20. ಯುದ್ಧಕಾಲದಲ್ಲಿ ರಾತ್ರಿವೇಳೆ ಶತ್ರು ಸೈನಿಕರು ವೈಮಾನಿಕ ದಾಳಿ ಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ , ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದನ್ನು ಏನನ್ನುವರು?

**ಉತ್ತರ:- ಬ್ಲಾಕ್ ಔಟ್ ನಿಯಮ**